ಜಗತ್ತಿನ ಸಮತೋಲನ ನಿಂತಿದೆ. ಇದು ನಮ್ಮ ಅನುಭವಕ್ಕೂ ಬರುತ್ತಲೇ ಇರುತ್ತದೆ. ಆದುದರಿಂದಲೇ ಮನುಷ್ಯರು 'ದ' ಎಂದರೆ 'ದಾನಬುದ್ಧಿ' ಎಂದು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು.

ಮನುಷ್ಯರಾದ ಬಳಿಕ ರಾಕ್ಷಸರ ಸರದಿ. ಅವರಿಗೂ ಪ್ರಜಾಪತಿ ಹೇಳಿದ ಮಾತು 'ದ'. ಅದನ್ನು ಅವರು 'ದಯಧ್ವ' – ಎಂದರೆ ದಯೆ, ಕರುಣೆ ಎಂದು ಅರ್ಥ ಮಾಡಿಕೊಂಡರು. ಅವರು ಹಾಗೆ ಅರ್ಥಮಾಡಿಕೊಂಡದ್ದು ಸರಿಯಾಗಿಯೇ ಇದೆಯೆನ್ನಿ! ಹಿಂಸೆಯಲ್ಲಿ ತೊಡಗಿರುವವರನ್ನು ನಾವು 'ರಾಕ್ಷಸರು' ಎಂದೇ ವ್ಯವಹರಿಸುತ್ತೇವೆ. ಹಿಂಸೆಗೆ ಇರುವ ಮುಖಗಳು ಹಲವು. ಹಿಂಸೆ ಎಂದರೆ ಅದು ಕೇವಲ ದೈಹಿಕ ಹಿಂಸೆಯಷ್ಟೆ ಅಲ್ಲ; ಮಾನಸಿಕ ಹಿಂಸೆಯೂ ಹಿಂಸೆಯೇ. ಕೆಲವರಿಗೆ ಸದಾ ಬೇರೆಯವರಿಗೆ ತೊಂದರೆ, ಹಿಂಸೆಗಳನ್ನು ಕೊಡುವುದರಲ್ಲಿಯೇ ಸಂತೋಷ. ಅದು ಚುಚ್ಚುಮಾತಿನ ಮೂಲಕ ಆಗಿರಬಹುದು; ದೈಹಿಕ ಹಲ್ಲೆಯ ಮೂಲಕವೂ ಆಗಿರಬಹುದು. ಒಟ್ಟಿನಲ್ಲಿ ಎಲ್ಲರೂ ಗೋಳಾಟದಲ್ಲಿ ನರಳುತ್ತಿರಬೇಕು – ಎಂಬ ಅಸ್ವಾಸ್ಥ್ಯದ ಮನಃಸ್ಥಿತಿಯವರು ನಮ್ಮ ಸುತ್ತಮುತ್ತಲು ಹಲವರಿರುತ್ತಾರೆ. ಅವರೆಲ್ಲರೂ ರಾಕ್ಷಸರೇ ಸರಿ. ಪುರಾಣಗಳಲ್ಲಿ ಕಂಡುಬರುವ ರಾಕ್ಷಸರಷ್ಟೆ ರಾಕ್ಷಸರಲ್ಲ. ಮೂರು ಲೋಕದಲ್ಲಿ ಎಲ್ಲಿಯೂ ಒಳ್ಳೆಯದು ನೆಲೆಯೂರಬಾರದು – ಇದು ರಾಕ್ಷಸರ ಸಂಕಲ್ಪ. ಲೋಕದ ಒಳಿತಾಗಾಗಿ ಕಾಡಿನಲ್ಲಿಯೇ ನಿಂತು ಯಜ್ಞಯಾಗಗಳನ್ನು ಮಾಡುವ ಸಾತ್ವಿಕರಾದ ಋಷಿಗಳನ್ನು ಹಿಂಸಿಸಿ, ಅವರ ಕ್ರಿಯಾಕಲಾಪಗಳನ್ನು ಹಾಳುಮಾಡುವುದೆಂದರೆ ರಾಕ್ಷಸರಿಗೆ ತುಂಬ ಸಂತೋಷ. ಇಂಥ ರಾಕ್ಷಸರು 'ದ' ಎಂದರೆ ದಯೆ ಎಂದು ಅರ್ಥಮಾಡಿಕೊಂಡದ್ದು ಸರಿಯಾಗಿಯೇ ಇದೆಯಲ್ಲವೆ? ಪರಪೀಡನೆಯೇ ಮಹಾಪಾಪ – ಎನ್ನುವ ಮಾತಿದೆ. ಬೇರೆಯವರಿಗೆ ಕೆಟ್ಟದ್ದನ್ನು ಬಯಸುವುದು, ಮಾಡುವುದು ಎಂದರೆ ಒಟ್ಟು ಪರಿಸರದ ನೆಮ್ಮದಿಯನ್ನೇ ಹಾಳು ಮಾಡಿದಂತೆ. ಏಟಾಗಲೀ ಮಾತಾಗಲೀ – ನನಗೆ ಹೇಗೆ ನೋವನ್ನೂ ದುಃಖವನ್ನೂ ಉಂಟುಮಾಡಬಲ್ಲದೋ ಅಂತೆಯೇ ಇತರರಿಗೂ ನನ್ನ ಏಟು ಮತ್ತು ಮಾತು ಮಾಡಬಲ್ಲದು ಎಂದು ತಿಳಿದು, 'ನನ್ನಂತೆಯೇ ಇತರರು' ಎಂಬ ಆತ್ಮವಿಸ್ತರಣಗುಣವೇ ದಯೆಯ ಮೂಲ.

ಪ್ರಜಾಪತಿ ಮೂವರಿಗೂ ಹೇಳಿದ್ದು ಒಂದೇ ಮಾತು. ಆದರೆ ಆ ಒಂದೇ ಮಾತು ಅವರವರ ಸಂಸ್ಕಾರ–ಹಿನ್ನೆಲೆಗಳಿಗೆ ತಕ್ಕಂತೆ ದೇವತೆಗಳೂ ಮನುಷ್ಯರೂ ರಾಕ್ಷಸರೂ ಅರ್ಥಮಾಡಿಕೊಂಡರು. ದಿಟವಾಗಿ ನೋಡಿದರೆ, ಈ ಮೂವರು ಪ್ರತ್ಯೇಕ ವ್ಯಕ್ತಿಗಳೇ ಅಲ್ಲ ಎನಿಸುತ್ತದೆ. ನಮ್ಮಲ್ಲಿಯೇ ದೇವರೂ ಮನುಷ್ಯನೂ ರಾಕ್ಷಸನೂ ಇದ್ದಾನೆ; ಅವರ ಗುಣಗಳೂ ನಮ್ಮಲ್ಲಿಯೇ ಇವೆ. ನಮ್ಮ ವ್ಯಕ್ತಿತ್ವದಲ್ಲಿರುವ ಲೋಪದೋಷಗಳನ್ನು ನಾವಷ್ಟೆ ತಿದ್ದಿಕೊಳ್ಳಲು ಸಾಧ್ಯ. ದೈವತ್ವ, ಮನುಷ್ಯತ್ವ ಮತ್ತು ರಾಕ್ಷಸತ್ವದ ಗುಣಗಳನ್ನೇ ಸತ್ವ, ರಜಸ್ಸು ಮತ್ತು ತಮಸ್ಸು ಎಂದು ಕರೆದಿರುವುದು. ಈ ಮೂರು ಗುಣಗಳ ಮಿಶ್ರಣದಿಂದಲೇ 'ಮನುಷ್ಯ' ಹುಟ್ಟಿರುವುದು. ಆದರೆ ಈ ಮೂರು ಗುಣಗಳಲ್ಲಿ ಯಾವುದೊಂದು ಹೆಚ್ಚಾದರೂ ನಮ್ಮತನಕ್ಕೆ ತೊಂದರೆ ಒದಗುತ್ತದೆ. ಈ ಮೂರರ ಹಿತವಾದ ಸಮನ್ವಯವೇ ದಿಟವಾದ ಮನುಷ್ಯತ್ವ. ಇಂಥ ಹಿತಾಹಿತಗಳ ವಿವೇಚನೆಯಿಂದ ಸಾಮರಸ್ಯದ ವ್ಯಕ್ತಿತ್ವವನ್ನು ರೂಢಿಸಿಕೊಳ್ಳಿ ಎನ್ನುತ್ತಿದೆ, ಉಪನಿಷತ್.